# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾ ಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 133/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 28-04-2025 ರಂದು ಪ್ರಮಾಣ ಮಾಡಿಸಲಾಯಿತು**

| | | |
|---|---|---|
| **ಸಾಕ್ಷಿಯ ಹೆಸರು** | ಃ ಯಶವಂತ | **ಪ್ರಾ.ಸಾ ಃ 02** |
| **ತಂದೆ ಃ ಗಂಡ ಹೆಸರು** | ಃ ಮೋಹನ ಕುಮಟಾಕರ | **ಚಾ.ಸಾ ಃ 02** |
| **ವಯಸ್ಸು** | ಃ 45 ವರ್ಷ | |
| **ಉದ್ಯೋಗ** | ಃ ಸೀನಿಯರ್ ಅಸೋಸಿಯಟ್ಸ್ ಎಸ್ ಬಿ ಐ ಹುಬ್ಬಳ್ಳಿ | |
| **ವಾಸಸ್ಥಳ** | ಃ ಹುಬ್ಬಳ್ಳಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 05.02.2016 ರಿಂದ 10.11.2017 ರವರೆಗೆ ಕಲಘಟಗಿಯ ಎಸ್ ಬಿ ಎಂ ಶಾಖೆಯಲ್ಲಿ ಹೆಡ್ ಕ್ಯಾಶೀಯರ ಎಂದು ಕರ್ತವ್ಯನಿರ್ಹಿಸಿರುತ್ತೇನೆ.

ದಿನಾಂಕ 06.04.2017 ರಂದು ಕಲಘಟಗಿಯ ಎಸ್ ಬಿ ಎಂ ಶಾಖೆಯಲ್ಲಿ ಕರ್ತವ್ಯದಲ್ಲಿದ್ದಾಗ ಪೋಲೀಸರು ಶಾಖೆಗೆ ಭೇಟಿ ನೀಡಿದ್ದು ಕಾರ ಲೋನಗೆ ಸಂಬಂಧಿಸಿದಂತೆ ಮೋಸ ಹಾಗೂ ವಂಚನೆ ವ್ಯವಹಾರ ಆಗಿದ್ದು ಅದಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರಿಗೆ ಬಂದಿದ್ದೇವೆ ಎಂದು ಹೇಳಿ ಈಗ ತೋರಿಸಲಾದ ಪಂಚನಾಮೆಗೆ ಬ್ಯಾಂಕ ಆವರಣದಲ್ಲಿ ಪೋಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ, ಪಂಚನಾಮೆಯನ್ನು ನಿಪಿ-13, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ-3 ಹಾಗೂ 1 ರವರು ಹಾಜರಿದ್ದರು. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೋಲೀಸರು ನಿಪಿ-13 ರಂತೆ ಪಂಚನಾಮೆ ಜರುಗಿಸಿರುತ್ತಾರೆ. ಬೆಳಿಗ್ಗೆ 10-00 ರಿಂದ 11-00 ರವರೆಗೆ ಜರುಗಿಸಿರುತ್ತಾರೆ. ಕಲಘಟಗಿಯ ಎ ಪಿ ಎಂ ಸಿ ಕ್ರಾಸ್ ಹತ್ತಿರ ಶಾಖೆ ಇರುತ್ತದೆ. ಪಂಚನಾಮೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

***ಪಾಟೀ ಸವಾಲುಃ 1* ನೇ ಆರೋಪಿ ಪರ ಶ್ರೀ ಆರ್ ಸಿ ಎಚ್ ಪರ ಎಫ್ ಎನ್ ಎಂ ವಕೀಲರಿಂದಃ**

(ಸಾಕ್ಷಿ ಪಾಟೀ ಸವಾಲಿಗೆ ಕಾಲವಾಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲು ಯಾವುದೆ ಕಾರಣಗಳು ಕಂಡುಬರುತ್ತಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ**

ನನಗೆ ಪೋಲೀಸರು ಪಂಚನಾಮೆ ಸಲುವಾಗಿ ನೋಟೀಸ ಕೊಟ್ಟಿರಲಿಲ್ಲ. ನಿಪಿ-13 ರ ಬರವಣಿಗೆಯನ್ನು ಯಾರು ಮಾಡಿದ್ದಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ.

ನಾನು ಪೋಲೀಸ ಠಾಣೆಗೆ ಎಂದಿಗೂ ಹೋಗಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯವನ್ನು ನನಗೆ ಓದಿ ಹೇಳಿದ್ದಾರೆ. ಬ್ಯಾಂಕ ಶಾಖೆಯಲ್ಲಿ ಸಿ ಸಿ ಟಿ ವಿ ಕ್ಯಾಮರಾ ಅಳವಡಿಸಲಾಗಿದೆ ಎಂದರೆ ನಿಜ. ಸಿ ಸಿ ಟಿ ವಿ ಬಗ್ಗೆ ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೋಲೀಸರು ಹೇಳಿದ ಪ್ರಕಾರ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ನಿಜ. ನಾನು ಪೋಲೀಸ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎ ಟಿ ಓ ವಕೀಲರಿಂದಃ**

(4 ನೇ ಆರೋಪಿ ಪರ ಮಾಡಿದ ಪಾಟೀ ಸವಾಲು ಅಳವಡಿಸಿಕೊಳ್ಳಲು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.